**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 3863/2022**

| | | |
|---|---|---|
| ಸಾಕ್ಷಿಯ ಹೆಸರುಃ | ಮಂಜುನಾಥ | ಫ್ರಾಸಾಃಃ 5 |
| ತಂದೆ ಹೆಸರುಃ | ಬಸಪ್ಪ | ಚಾಸಾಃಃ 5 |
| ವಯಸ್ಸುಃ | 45 ವರ್ಷ | ಪ್ರಮಾಣೀಕರಿಸಿದ<br>ದಿಃ 22/01/2024 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ದೊಡ್ಡಕಮರವಳ್ಳಿ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಆರೋಪಿತನ ಪರಿಚಯವಿದೆ. ನನಗೆ ಫ್ರಾಸಾ-1 ರಿಂದ 4 ರವರ ಪರಿಚಯ ಇದೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ಮಹಜರ್‌ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಬಿ)** ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ ಮಾನ್ಯ ಸಸಹ ರವರಿಂದಃ**

ಈಗ ನನಗೆ ಓದಿ ಹೇಳಿದಂತೆ ''ದಿನಾಂಕಃ17/08/2022 ರಂದು ........................... ದಕ್ಷಿಣಕ್ಕೆ ಬಸಪ್ಪ ಬಿನ್ ದೊಡ್ಡಯ್ಯ ರವರ ಜಮೀನು ಇರುತ್ತದೆ ಈ

ಮಹಜರ್ ಮುಕ್ತಾಯ' ಎಂದು ನಿಪಿ.2 ರಂತೆ ಮಹಜರ್ ಕ್ರಮ ಜರುಗಿಸಲಾಯಿತು ಎಂದರೆ ಸರಿಯಲ್ಲ. ಸದರಿ ಮಹಜರ್ ಗೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆದ್ದರಿಂದ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ**

ಇಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**